ಮಲಪ್ರಭಾದಿಂದ ಹಂದಿಗನ ಹಳ್ಳಕ್ಕೆ ನೀರು ಬಿಡುವುದು

೨೧೩(೬೦೫) ಶ್ರೀ ಎಂ. ಕೆ. ಕಾಲಕರ್ಣಿ (ನವಲಗುಂದ).—ಮಾನ್ಯ ಲೋಕೋಪಯೋಗಿ ಜಲಾಸಯನ ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಮಲಪ್ರಭಾ ಎಡ ಹಾಗೂ ಬಲದಂಡೆಯ ಕಾಲುವೆಯಲ್ಲಿಯ ಹುಬ್ಬಳ್ಳಿ ತಾಲ್ಲೂಕ್ ಕಿರೇಸೂರು ಹತ್ತಿರವಿರುವ ನೀರ್ಗಾಲುವೆ ಮುಂದೆ ಮೇಲ್ಗಾಲುವೆಯನ್ನು ಯಾವಾಗ ಪೂರ್ಣಗೊಳಿಸಲಾಗುವುದು?

ಆ) ಪೂರ್ಣವಾದ ನಂತರ ಕಾಲುವೆಯ ನೀರನ್ನು ಹಂದಿಗನ ಹಳ್ಳಕ್ಕೆ ಬಿಡಲಾಗುವುದೇ?

ಇ) ಹಾಗಿದ್ದಲ್ಲಿ ಎಷ್ಟು ದಿನಗಳಲ್ಲಿ ನೀರನ್ನು ಬಿಡಲಾಗುವುದು?

ಈ) ಮೇಲ್ಕಂಡ ಕಾಮಗಾರಿಗೆ ಬೇಕಾಗುವ ಹಣವನ್ನು ಒದಗಿಸಲಾಗಿದೆಯೇ ?

ಶ್ರೀ ಪೆಚ್.ಡಿ. ದೇವೇಗೌಡ.—(ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಮಲಪ್ರಭಾ ಬಲದಂಡೆ ಕಾಲುವೆಗೆ ಕಿರೇಸೂರು ಹತ್ತಿರ ಹರಿಯುವ ಬೆಣ್ಣಿಹಳ್ಳಕ್ಕೆ ಅಡ್ಡಲಾಗಿ ಕಟ್ಟುತ್ತಿರುವ ನೀರು ಮೇಲ್ಗಾಲುವೆ ಅಥವಾ ಜಲವಾಹಕ ಸೇತುವೆಯನ್ನು (ಅಕ್ವಿಡಕ್ಟ್) ಸೆಪ್ಟೆಂಬರ್ ೧೯೮೫ ರ ಕೊನೆಗೆ ಪೂರ್ಣಗೊಳಿಸಲಾಗುವುದು. ಎಡದಂಡೆ ಕಾಲುವೆಯು ಹುಬ್ಬಳ್ಳಿ ತಾಲ್ಲೂಕಿನಲ್ಲಿ ಹಾದು ಹೋಗುವುದಿಲ್ಲ.

ಆ) ಮಲಪ್ರಭಾ ಬಲದಂಡೆ ಕಾಲುವೆಯನ್ನು ಹಂದಿಗನ ಹಳ್ಳವನ್ನೂ ದಾಟಿ ೧೩೮ ಕಿ. ಮೀ. ವರೆಗೂ ತೆಗೆಯಲಾಗುವುದು.

ಇ) ೯೪ ಕಿ. ಮೀ. ರವರೆಗೆ ಜೂನ್ ೧೯೮೭ ರ ಹೊತ್ತಿಗೆ ನೀರನ್ನು ಬಿಡಲು ಯೋಚಿಸಲಾಗಿದೆ.

ಈ) ಹೌದು.

ಶ್ರೀ ಎಂ. ಕೆ. ಕಾಲಕರ್ಣಿ.—೧೯೮೭ರ ಹೊತ್ತಿಗೆ ನೀರನ್ನು ಬಿಡುವುದಾಗಿ ಮಾನ್ಯ ಸಚಿವರು ಹೇಳಿದರು. ಹಂದಿಗನ ಹಳ್ಳಕ್ಕೆ ನೀರನ್ನು ತರುವ ಸಲುವಾಗಿ ಮೇಲ್ ಕಾಲುವೆಯನ್ನು ಯಾವಾಗ ಪ್ರಾರಂಭ ಮಾಡುತ್ತೀರೆಂದು ಕೇಳುತ್ತೇನೆ.

ಶ್ರೀ ಪೆಚ್. ಡಿ. ದೇವೇಗೌಡ.—ಮಾನ್ಯ ಸದಸ್ಯರು ಹೇಳಿದಂತೆ ಹಂದಿಗನ ಹಳ್ಳಕ್ಕೆ ಅಕ್ವಿಡೆಕ್ಟ್ ಹಾಕಬೇಕಾಗಿದೆ. ಅದನ್ನು ಮಾಡಿದರೆ ಅವರ ಕ್ಷೇತ್ರದ ಜಮೀನುಗಳಿಗೆ ನೀರು ಬರುತ್ತದೆ. ಈ ಕೆಲಸವನ್ನು ಬಿಟ್ಟುಬಿಡುತ್ತಾರೆಂಬ ಸಂಶಯವನ್ನು ಅವರು ಪಡಬೇಕಾಗಿಲ್ಲ. ಅಕ್ವಿಡೆಕ್ಟ್ ಹಾಕುತ್ತೇವೆ. ಇದಕ್ಕೆ ತಗಲತಕ್ಕಂಥ ಎರಡು ಕೋಟಿ ರೂಪಾಯಿಗಳನ್ನು ಖರ್ಚುಮಾಡುತ್ತೇವೆ. ಈಗಾಗಲೇ ತಾಂತ್ರಿಕವಾಗಿ ಬೇಕಾಗಿರತಕ್ಕಂಥ ಕಾರ್ಯಕ್ರಮಗಳನ್ನು ತೆಗೆದುಕೊಂಡು ಅದನ್ನು ಮಾಡಿಯೇ ಮುಂದೆ ಹೋಗುತ್ತೇವೆ. ನಿಮ್ಮ ಜಮೀನಿಗೂ ನೀರು ಬರುತ್ತದೆ. ಯಾವ ತೊಂದರೆಯೂ ಆಗುವುದಿಲ್ಲ. ಸಂಶಯ ಪಡಬೇಡಿ.

ಗೋಕಾಕ್ ನಗರದಲ್ಲಿ ಪರಿಶಿಷ್ಟವರ್ಗ ಜನಾಂಗದವರ ಕಾಲೋನಿ ನಿರ್ಮಾಣ

೨೧೪ (೬೨೫) ಶ್ರೀ ಎಲ್. ಮುತ್ತಣ್ಣವರ್ (ಗೋಕಾಕ್).—ಮಾನ್ಯ. ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

ಅ) ಗೋಕಾಕ ನಗರದಲ್ಲಿ ಪರಿಶಿಷ್ಟ ವರ್ಗದ ಜನಾಂಗದವರಿಗಾಗಿ ಕಾಲೋನಿಯನ್ನು ನಿರ್ಮಿಸಲಾಗುವುದೇ ?

ಆ) ಹಾಗಿದ್ದಲ್ಲಿ ಅದನ್ನು ಯಾವಾಗ ನಿರ್ಮಿಸಲಾಗುವುದು ?

ಇ) ಸದರಿ ಕಾಲೋನಿಯನ್ನು ನಿರ್ಮಿಸಲು ಇರುವ ತೊಂದರೆಗಳೇನು ?

ಶ್ರೀ ವಿ. ಎಲ್. ಪಾಟೀಲ್ (ಸಮಾಜ ಕಲ್ಯಾಣ ಸಚಿವರು).—

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಸಧ್ಯದಲ್ಲಿಯೇ ಗೋಕಾಕ್ ನಗರದಲ್ಲಿ ಪರಿಶಿಷ್ಟ ವರ್ಗದ ಜನಾಂಗದವರಿಗಾಗಿ ಕಾಲೋನಿಯನ್ನು ನಿರ್ಮಿಸಲು ಸೆಂಟ್ರಲ್ ಗೌರ್ನಮೆಂಟ್‌ಗೆ ಈಗಾಗಲೇ ತಿಳಿಸಿದ್ದೇವೆ.

ಶ್ರೀ ಎ. ಎಲ್. ಮುತ್ತಣ್ಣನವರ್.—ಮಾನ್ಯ ಅಧ್ಯಕ್ಷರೇ, ಪರಿಶಿಷ್ಟ ಜನಾಂಗದವರಿಗೆ ಗೋಕಾಕ್ ನಗರದಲ್ಲಿ ಕಾಲೋನಿಯನ್ನು ನಿರ್ಮಾಣ ಮಾಡಲು ಸೆಂಟ್ರಲ್ ಗೌರ್ನಮೆಂಟ್‌ಗೆ ಬರೆದಿದ್ದೇವೆಂದು ಮಾನ್ಯ ಸಚಿವರು ಹೇಳಿದರು, ಆಷ್ಟೇ ಅಲ್ಲ ಗೋಕಾಕ್ ತಾಲ್ಲೂಕಿನಲ್ಲೂ ಪರಿಶಿಷ್ಟ ಜನಾಂಗದವರಿಗೆ ಕಾಲೋನಿಗಳನ್ನು ನಿರ್ಮಿಸತಕ್ಕಂಥದ್ದು ಬಹಳ ಅವಶ್ಯಕತೆ ಇರುತ್ತದೆ. ಅದನ್ನು ಮಾಡಿಕೊಡಬೇಕೆಂದು ಒತ್ತಾಯ ತಂದಿದ್ದರೂ ಇದುವರೆಗೆ ಮಾಡಿಕೊಟ್ಟಿಲ್ಲ. ರಾಯಚೂರಿನಲ್ಲಿ ಟ್ರೈಬಲ್ ಜನಾಂಗದವರಿಗೆ ಕಾಲೋನಿಯನ್ನು ನಿರ್ಮಾಣಮಾಡಬೇಕೆಂದು ಸಮಾಜ ಕಲ್ಯಾಣ ಇಲಾಖೆಯವರಿಗೆ ಹಿಂದೆಯೇ ಒತ್ತಾಯ ಮಾಡಿದ್ದೆವು. ಕೊನೇಪಕ್ಷ ಇನ್ನುಮೇಲಾದರೂ ಕಾಲೋನಿಗಳನ್ನು ನಿರ್ಮಾಣ ಮಾಡತಕ್ಕಂಥ ಕೆಲಸವನ್ನು ಕೈಗೊಳ್ಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ವಿ. ಎಲ್. ಪಾಟೀಲ್.—ಗೋಕಾಕ್ ತಾಲ್ಲೂಕಿನಲ್ಲಿ ಕಾಲೋನಿಗಳನ್ನು ನಿರ್ಮಾಣ ಮಾಡುವ ಬಗ್ಗೆ ಕೇಂದ್ರ ಸರ್ಕಾರಕ್ಕೆ ಬರೆದಿದ್ದೇವೆ. ಒತ್ತಾಯಮಾಡಿ ಆದಷ್ಟು ಬೇಗ ಕಾಲೋನಿಗಳನ್ನು ನಿರ್ಮಾಣ ಮಾಡಲು ಪ್ರಯತ್ನ ಮಾಡುತ್ತೇನೆ.

ತುಂಗಭದ್ರಾ ನಾಲೆಯು ಬಯಲಿನ ಸಿಂಧನೂರು ತಾಲ್ಲೂಕಿನ ನಾಲೆಯು ಕೊನೆಯಭಾಗದ ಅಚ್ಚುಕಟ್ಟಿಗೆ ನೀರೊದಗಿಸುವ ಬಗ್ಗೆ

೨೧೬ (೪೨೬) ಶ್ರೀ ಆರ್. ನಾರಾಯಣಪ್ಪ (ಸಿಂಧನೂರು).—ಮಾನ್ಯ ಲೋಕೋಪಯೋಗಿ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

ಅ) ಸಿಂಧನೂರು ತಾಲ್ಲೂಕಿನಲ್ಲಿ ತುಂಗಭದ್ರಾ ಅಣೆಕಟ್ಟಿನ ಕಾಲುವೆಗಳ ಕೊನೆಯ ಭಾಗದ ರೈತರ ಬೆಳೆಗಳಿಗೆ ನೀರು ಒದಗಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು ?

ಆ) ತುಂಗಭದ್ರಾ ಅಚ್ಚುಕಟ್ಟು ಪ್ರದೇಶದಲ್ಲಿರುವ ರೈತರಿಗೆ ಏತ ನೀರಾವರಿಯ ಮೂಲಕ ನೀರು ಒದಗಿಸುವ ಏರ್ಪಾಡು ಮಾಡಲಾಗುವುದೇ ?

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಕಾಡಾ ಮತ್ತು ನೀರಾವರಿ ಮಂತ್ರಿಗಳು).—

ಅ) ಉಪಕಾಲುವೆಗಳ ನವೀಕರಣ, ಪಿಕಪ್ ಮತ್ತು ಫೀಡರ್ ನಾಲೆಗಳ ನಿರ್ಮಾಣ ಹಾಗೂ ಸಹಕಾರಿ ತಳಹದಿಯ ಮೇಲೆ ಏತ ನೀರಾವರಿ ಯೋಜನೆಗಳನ್ನು ಕೈಗೊಳ್ಳುವ ಉದ್ದೇಶಗಳು.

ಆ) ಕಾಲುವೆಯ ಕೊನೆಯ ಭಾಗಗಳಿಗೆ ಸಹಕಾರಿ ತಳಹದಿಯ ಮೇಲೆ ಏತ ನೀರಾವರಿ ಯೋಜನೆ ತೆಗೆದುಕೊಳ್ಳುವ ವಿಷಯ ಪರಿಶೀಲನೆಯಲ್ಲಿವೆ.

ಮಾನ್ಯ ಅಧ್ಯಕ್ಷರೇ, ತುಂಗಭದ್ರ ಕಾಲುವೆಯ ಕೊನೆಯ ಭಾಗದ ಹಳ್ಳಿಗಳಿಗೆ ನೀರನ್ನು ಒದಗಿಸಬೇಕೆಂದು ಮಾನ್ಯ ಬಸವರಾಜಪಾಟೀಲ್ ಏನು ಪ್ರಶ್ನೆಯನ್ನು ಕೇಳಿರುತ್ತಾರೋ ಅದೇ ಪ್ರಶ್ನೆಯನ್ನು ಮಾನ್ಯ ಸದಸ್ಯರು ಕೇಳುತ್ತಿದ್ದಾರೆ. ಅದರಬಗ್ಗೆ ಮುಂದೆ ಏನಾದರೂ ಮಾಡಲಿಕ್ಕೆ ಸಾಧ್ಯತೆಗಳಿದ್ದರೆ ಕ್ರಮ ತೆಗೆದುಕೊಳ್ಳುತ್ತೇನೆ. ಈಗಾಗಲೇ ಒಂದು ಫೀಡ್ ಚಾನಲ್ ಮಾಡಿದ್ದೇವೆ. ಬಾಕಿ ಉಳಿದಿರುವ ಕೆಲಸಗಳ ಬಗ್ಗೆ ಪರಿಶೀಲನೆ ಮಾಡುತ್ತೇನೆ.